# SRUJANI

ISSN: 2583-3510

## Indian Journal of Innovative Research and Development (SIJIRD)

Volume-1 (01), March-April 2022, Pp. 16-18
Bi-Monthly, Peer-Reviewed, Open Access, Indexed Journal
srujanifoundation@gmail.com
editor@srujani.in
www.srujani.in


# ಕೂಲಹಳ್ಳಿಯ ಗೋಣಿಬಸವೇಶ್ವರ ಜಾತ್ರೆ : ಸಾಂಸ್ಕೃತಿಕ ಅಧ್ಯಯನ


**ಬಸವರಾಜಪ್ಪ ಪೂಜಾರ**

ಕೋಡಿಹಳ್ಳಿ ಗ್ರಾಮ, ಕಣಿವಿಹಳ್ಳಿ ಪೋಸ್ಟ್, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ



***Abstract:***

ಕೂಲಹಳ್ಳಿ ಗ್ರಾಮವು ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ವಾಯುವ್ಯ ದಿಕ್ಕಿನಲ್ಲಿ 8 ಕಿಲೋಮೀಟರ್ ದೂರದಲ್ಲಿದೆ. ಈ ಗ್ರಾಮದಲ್ಲಿ ವಿವಿಧ ಸಮುದಾಯವರು ನೆಲೆಸಿದ್ದು, ಪ್ರಮುಖ ವೃತ್ತಿ ಕೃಷಿ ಮತ್ತು ಕೂಲಿಯಾಗಿದೆ. ಈ ಗ್ರಾಮದಲ್ಲಿ ಯುಗಾದಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ, ಶಿವರಾತ್ರಿ ಮುಂತಾದ ಹಬ್ಬಗಳ ಜೊತೆಗೆ ಗೋಣಿಬಸವೇಶ್ವರ ಸ್ವಾಮಿ ಜಾತ್ರೆಯನ್ನು ಕೂಡ ಮಾಡುತ್ತಾರೆ. ಈ ಜಾತ್ರೆಯು ಸುತ್ತಮುತ್ತಲಿನ ಪ್ರದೇಶದಲ್ಲಿ ಕೂಲಹಳ್ಳಿ ಜಾತ್ರೆಯೆಂದೆ ಪ್ರಸಿದ್ಧಿ ಪಡೆದಿದೆ. ಪ್ರಸ್ತುತ ಲೇಖನದಲ್ಲಿ ಈ ಜಾತ್ರೆಯ ಆಚರಣೆ ವಿಧಾನ ಮತ್ತು ಮಹತ್ವವನ್ನು ಜಾನಪದೀಯ ದೃಷ್ಟಿಕೋನದಿಂದ ವಿಶ್ಲೇಷಿಸಲಾಗಿದೆ.



***Key Words:*** ಅಜಿತನಾಥ, ಅಹಿಂಸೆ, ಜೈನಧರ್ಮ, ತೇರದಾಳ, ದಿಗಂಬರ, ಶ್ವೇತಾಂಬರ, ಅಜೀವಿಕ, ಮಹಾವೀರ, ಸತ್ಯಶೋಧ.


**ಪೀಠಿಕೆ**

ಕೂಲಹಳ್ಳಿ ಗ್ರಾಮವು ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲೂಕಿನ ಐತಿಹಾಸಿಕ ಹಿನ್ನಲೆಯುಳ್ಳ ಗ್ರಾಮವಾಗಿರುವುದರ ಜೊತೆಗೆ ಸಾಮಾಜಿಕವಾಗಿ, ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿಯೂ ಕೂಡ ಮಹತ್ವವನ್ನು ಹೊಂದಿದೆ. ಹಿಂದೆ ಈ ಗ್ರಾಮವು ಹರಪನಹಳ್ಳಿ ಪಾಳೆಯಗಾರರ ಆಡಳಿತಕ್ಕೆ ಒಳಪಟ್ಟ ಪ್ರದೇಶವಾಗಿತ್ತು. ಈಗಲೂ ಕೂಡ ಪಾಳೆಯಗಾರರು ಕಟ್ಟಿಸಿದ ದೇವಸ್ಥಾನ, ಅರಮನೆ, ಕೋಟೆ, ಸುರಂಗ ಮಾರ್ಗಗಳನ್ನು ಇಲ್ಲಿ ಕಾಣಬಹುದಾಗಿದೆ. ಈ ಗ್ರಾಮದಲ್ಲಿ ಶೇ.90 ರಷ್ಟು ಜನರು ಕೃಷಿ ಮತ್ತು ಕೃಷಿ ಕೂಲಿಯನ್ನೆ ಜೀವನ ಸಾಗಿಸುತ್ತಿದ್ದಾರೆ. 2011 ನೇ ಜನಗಣತಿ ಪ್ರಕಾರ ಈ ಗ್ರಾಮವು 2192.11 ಹೆಕ್ಟೇರ್ ಭೂ ಪ್ರದೇಶವನ್ನು ಹೊಂದಿದ್ದು, ಒಟ್ಟು 714 ಕುಟುಂಬಗಳು ಮತ್ತು 3,785 ಜನಸಂಖ್ಯೆ ಕಂಡು ಬರುತ್ತದೆ. ಒಟ್ಟು ಜನಸಂಖ್ಯೆಯಲ್ಲಿ 1951 ಪುರುಷ ಮತ್ತು 1834 ಮಹಿಳೆಯರು ಕಂಡು ಬರುತ್ತಾರೆ. ಸಾಕ್ಷರತಾ ಪ್ರಮಾಣವನ್ನು ನೋಡಿದಾಗ ರಾಜ್ಯದ ಸಾಕ್ಷರತೆ (75.36%) ಹೋಲಿಸಿದಾಗ ಈ ಗ್ರಾಮದಲ್ಲಿ ಅತ್ಯಂತ ಕಡಿಮೆ (55.88%) ಕಡಿಮೆಯಿದೆ. ಪುರುಷರಿಗೆ ಹೋಲಿಸಿದಾಗ (69.43%) ಮಹಿಳೆಯರ ಸಾಕ್ಷರತೆ (41.55%) ಅತ್ಯಂತ ಕಡಿಮೆಯಿರುವುದನ್ನು ನೋಡಬಹುದಾಗಿದೆ. ಸಾಮಾಜಿಕವಾಗಿ ಗಮನಿಸಿದಾಗ ಗ್ರಾಮದಲ್ಲಿ ವಿವಿಧ ಸಮುದಾಯಗಳು ನೆಲೆಸಿದ್ದರೂ ಕೂಡ ಅರ್ಧಕ್ಕಿಂತ ಹೆಚ್ಚು (ಶೇ.50.41) ಪರಿಶಿಷ್ಟಜಾತಿ (ಬೋವಿ, ಮಾದಿಗ, ಛಲವಾದಿ) ಸಮುದಾಯದವರು ಕಂಡು ಬಂದರೆ ಶೇ.0.98 ರಷ್ಟು ಪರಿಶಿಷ್ಟ ಬುಡಕಟ್ಟು (ವಾಲ್ಮೀಕಿ) ಜನರು ಕಂಡು ಬರುತ್ತಾರೆ.

ಬಯಲುನಾಡು ಪ್ರದೇಶವಾದ ಈ ಗ್ರಾಮದ ಭೂಮೇಲ್ಮೈ ಲಕ್ಷಣವನ್ನು ಗಮನಿಸಿದಾಗ ಮರಳು ಮಿಶ್ರಿತ ಮಣ್ಣನ್ನು ಹೊಂದಿದ್ದು ಅಲ್ಪ ಪ್ರಮಾಣದಲ್ಲಿ ಕಲ್ಲುಕ್ವಾರಿ, ಗ್ರಾಮದ ಪೂರ್ವ ಮತ್ತು ಪಶ್ಚಿಮ ದಿಕ್ಕಿನ ಕಡೆ ಕಲ್ಲು ಹಾಸು ಬಂಡೆಗಳಿವೆ. ಒಟ್ಟು ಭೂ ಪ್ರದೇಶದಲ್ಲಿ 2,216 ಎಕರೆ ಕಾದಿಟ್ಟ ಅರಣ್ಯವಿದ್ದು, ಬೇವು, ಜಾಲಿ, ಹಲಸು, ನೀಲಗಿರಿ ಮರಗಳಿವೆ. ಊರಿನ ಉತ್ತರಕ್ಕೆ ಬೆಟ್ಟದ ಮಲ್ಲೇಶ್ವರ ಎಂಬ ಐತಿಹಾಸಿಕ ದೇವಸ್ಥಾನವಿದೆ.

ಗ್ರಾಮದ ಸಾಮಾಜಿಕ ವ್ಯವಸ್ಥೆಯನ್ನು ಗಮನಿಸಿದಾಗ ಲಿಂಗಾಯತ, ಪಂಚಮಸಾಲಿ, ಗಾಣಿಗ, ಕುರುಬ, ಬೋವಿ, ಮಾದಿಗ, ಛಲವಾದಿ, ಜೋಗೇರು, ಬಡಿಗೇರು, ಈಡಿಗರು, ಮಡಿವಾಳರು ನೆಲೆಸಿದ್ದು ಮುಂತಾದ ಸಮುದಾಯಗಳಿವೆ. ಈ ಗ್ರಾಮದಲ್ಲಿ ಎಲ್ಲಾ ಸಮುದಾಯದವರು ಪರಸ್ಪರ ಸೌಹಾರ್ದತೆಯಿಂದ ನೆಲೆಸಿದ್ದು, ಊರಿನ ಪ್ರತಿಯೊಂದು ಕಾರ್ಯಕ್ರಮ, ಹಬ್ಬಹರಿದಿನ ಹಾಗೂ ಜಾತ್ರೆಗಳಲ್ಲಿ ಒಟ್ಟಾಗಿ ಭಾಗವಹಿಸುತ್ತಾರೆ.


*Please cite this article as:* ಬಸವರಾಜಪ್ಪ ಪೂಜಾರ. (2022). ಕೂಲಹಳ್ಳಿಯ ಗೋಣಿಬಸವೇಶ್ವರ ಜಾತ್ರೆ : ಸಾಂಸ್ಕೃತಿಕ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(1), 16–18.

**ಗೋಣಿಬಸವೇಶ್ವರರ ಹಿನ್ನಲೆ**

ಕೂಲಹಳ್ಳಿಯ ಶ್ರೀ ಮದ್ದಾನೇಶ್ವರ ಸ್ವಾಮಿ ಮತ್ತು ಕನಕಮ್ಮನ ಮಗನಾಗಿ ಹುಟ್ಟಿದ ಪವಾಡ ಪುರುಷರಾದ ಶ್ರೀ ಗೋಣಿಬಸವೇಶ್ವರರು. ಇವರು ಪಂಚಗಣಾಧೀಶ್ವರರಲ್ಲಿ ಪ್ರಮುಖರು. ಪಂಚಗಣಾಧೀಶರರು ತಮ್ಮ ಜೀವಿತದುದ್ದಕ್ಕೂ ಮನುಷ್ಯನ ಲೌಕಿಕ ಬದುಕಿನ ಕುರಿತು ಚಿಂತಿಸುತ್ತಿದ್ದರು. ತಮ್ಮ ಚಿಂತನೆ ಮತ್ತು ಬೋಧನೆಯ ಮುಖೇನ ಕರ್ನಾಟಕ ಮಾತ್ರವಲ್ಲದೆ ದಕ್ಷಿಣ ಭಾರತದ ಹಲವಾರು ರಾಜ್ಯಗಳಲ್ಲಿ ಲಕ್ಷಾಂತರ ಭಕ್ತರ ಮನೆಮನಗಳಲ್ಲಿ ಆರಾಧ್ಯದೈವನಾಗಿ, ನಿರಂತರ ಜ್ಯೋತಿಯಾಗಿ ಬೆಳಕನ್ನು ನೀಡುತ್ತಿದ್ದಾರೆ.

ಸುಮಾರು 15-16 ನೇ ಶತಮಾನದಲ್ಲಿದ್ದ ಗೋಣಿಬಸವೇಶ್ವರರು ಈಗಿರುವ ಬಾಗಳಿಯ ಕಲ್ಲೇಶ್ವರ ದೇವಸ್ಥಾನಕ್ಕೂ ಬಂದಿದ್ದರೆಂಬ ಪ್ರತೀತಿ ಇದೆ. ಕೂಲಹಳ್ಳಿ ನೂರಾರು ಮನೆಗಳಿರುವ ಗ್ರಾಮ, ಇಲ್ಲಿ ಗೋಣಿಬಸವೇಶ್ವರ ದೇವಸ್ಥಾನವಲ್ಲದೆ, ಮದ್ದಾನಸ್ವಾಮಿ ಮಠ, ಕೋಟೆ ಸಹ ಇವೆ. ಇಲ್ಲಿ ಗೋಣಿಬಸವೇಶ್ವರ, ಕೂಲಳೆಮ್ಮ, ಕಾಳಮ್ಮ, ಚೌಡಮ್ಮ, ಆಂಜನೇಯ, ದುರುಗಮ್ಮ, ಈರಣ್ಣ, ಕನಕಮ್ಮ, ವಡ್ಡಟ್ಟೆಮ್ಮ ಮುಂತಾದ ದೇವರುಗಳನ್ನು ಆರಾಧಿಸುತ್ತಾರೆ. ಹಾಗೂ ಹಿಂದೂಗಳು ಆಚರಿಸುವ ಬಹುತೇಕ ಎಲ್ಲಾ ಹಬ್ಬಗಳನ್ನು ಆಚರಿಸುವುದರ ಜೊತೆಗೆ ಗೋಣಿಬಸವೇಶ್ವರರ ಜಾತ್ರೆಯನ್ನು ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಆಚರಿಸುತ್ತಾರೆ.

**ಗೋಣಿಬಸವೇಶ್ವರ ಜಾತ್ರೆ**

ಕೂಲಹಳ್ಳಿ ಗ್ರಾಮದಲ್ಲಿ ನಡೆಯುವ ಶ್ರೀ ಗೋಣಿಬಸವೇಶ್ವರ ಜಾತ್ರೆಯಲ್ಲಿ ಪ್ರತಿಯೊಂದು ಸಮುದಾಯದ ಜನರು ವಿವಿಧ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದನ್ನು ಕಾಣಬಹುದಾಗಿದೆ. ಲಿಂಗಾಯಿತರು ಪೂಜೆ ಮಾಡುವ ಅರ್ಚಕರಾಗಿರುವುದರ ಮುಖೇನ ಗೋಣಿಬಸವೇಶ್ವರ ಜಾತ್ರೆಯಲ್ಲಿ ಪ್ರಮುಖ ಪಾತ್ರವಹಿಸಿದರೆ ವಾಲ್ಮೀಕಿ ಸಮುದಾಯದವರು ಜಾತ್ರೆಯ ಸಂದರ್ಭದಲ್ಲಿ ಊರಿನ ಬಾಗಿಲಿಗೆ ತೋರಣಗಳನ್ನು ಕಟ್ಟುವುದು, ಗ್ರಾಮವನ್ನು ಅಲಂಕಾರ ಮಾಡುವುದು ಹಾಗೂ ನೆರೆಯ ಗ್ರಾಮಗಳಿಗೆ ಹೋಗಿ ಭಕ್ತಾದಿಗಳಿಂದ ಹಣ, ದವಸ-ಧಾನ್ಯವನ್ನು ಕ್ರೋಢೀಕರಿಸಿ ತರುವುದನ್ನು ಮಾಡುತ್ತಾರೆ. ಗೋಣಿಬಸವೇಶ್ವರರ ರಥೋತ್ಸವದಲ್ಲಿ ದೇವರ ಗದ್ದುಗೆಗೆ ಕಂಬಳಿಯನ್ನು ಕುರುಬ ಸಮುದಾಯದವರು ದಾನವಾಗಿ ನೀಡುತ್ತಾರೆ. ಬಾರಿಕ ಸಮುದಾಯದವರು ಕೂಲಹಳ್ಳಿಯ ರಥೋತ್ಸವದಲ್ಲಿ ಪಂಜು, ದೀಪವನ್ನು ಹಿಡಿಯುವ ಕಾಯಕದಲ್ಲಿ ತೊಡಗುತ್ತಾರೆ.

ದಲಿತ ಸಮುದಾಯದವರು ಜಾತ್ರೆ ಸಂದರ್ಭದಲ್ಲಿ ದೇವಸ್ಥಾನಗಳ ಮುಂದೆ ತೆಂಗಿನ ಚಪ್ಪರವನ್ನು ಹಾಕುವುದು ಹಾಗೂ ಗ್ರಾಮದ ಸ್ವಚ್ಛತೆಯ ಜವಬ್ದಾರಿ ಹೊರುತ್ತಾರೆ. ಶ್ರೀ ಗೋಣಿಬಸವೇಶ್ವರ ಜಾತ್ರೆಯಲ್ಲಿ ಪ್ರಮುಖವಾದ ಕಾರ್ಯ ಎಂದರೆ ರಥವನ್ನು ಕಟ್ಟುವುದು ಈ ಕಾರ್ಯವನ್ನು ಬಡಗಿ/ ವಿಶ್ವಕರ್ಮ ಸಮುದಾಯವರು ವಹಿಸಿಕೊಳ್ಳುತ್ತಾರೆ. ಬೋವಿ ಸಮುದಾಯವರು ಶ್ರೀ ಗೋಣಿಬಸವೇಶ್ವರ ರಥೋತ್ಸವ ಮುಗಿದಾದ 6 ದಿನಗಳ ನಂತರ ರಥವನ್ನು ತೆರವುಗೊಳಿಸುವ ಕಾರ್ಯವನ್ನು ಮಾಡಿದರೆ ಕುಂಬಾರ ಸಮುದಾಯದವರು ಹಬ್ಬ, ಜಾತ್ರೆ, ಸಂದರ್ಭಗಳಲ್ಲಿ ಹೊಸ ಮಡಿಕೆ ತಯಾರಿಸುವ ಕಾಯಕದಲ್ಲಿ ತೊಡಗಿಕೊಳ್ಳವರು.ಮಡಿವಾಳ ಸಮುದಾಯದವರು ಶ್ರೀ ಗೋಣಿಬಸವೇಶ್ವರ ಜಾತ್ರಾ ಸಂದರ್ಭದಲ್ಲಿ ದೇವರಿಗೆ ಪಲ್ಲಕ್ಕಿಗೆ ಹಾಗೂ ಸ್ವಾಮೀಜಿಯವರಿಗೆ ಮೆರವಣಿಗೆ ಹೊರಟಾಗ ಮಡಿಬಟ್ಟೆಯನ್ನು ಹಾಸುತ್ತಾರೆ. ಕೊರಚ ಸಮುದಾಯದವರು ಶ್ರೀ ಗೋಣಿಬಸವೇಶ್ವರ ಜಾತ್ರೆಯ ಸಂದರ್ಭದಲ್ಲಿ ರಥಕ್ಕೆ ಹಗ್ಗವನ್ನು ತಯಾರಿಸಿ ಬಳುವಳಿಯಾಗಿ ದೇವಸ್ಥಾನಕ್ಕೆ ನೀಡುತ್ತಾರೆ.

ಈ ಜಾತ್ರೆಯಲ್ಲಿ ಕೇವಲ ಕೂಲಹಳ್ಳಿ ಜನರು ಮಾತ್ರವಲ್ಲದೆ ಅಕ್ಕ-ಪಕ್ಕದ ಗ್ರಾಮದ ಜನರು ಕೂಡ ಜಾತ್ರೆಯಲ್ಲಿ ಭಾಗವಹಿಸಿ ಸಂಭ್ರಮಪಡುತ್ತಾರೆ. ನೀಲಗುಂದ, ಅನಂತನಹಳ್ಳಿ, ನಾರಾಯಣಪುರ, ಮಾದಪುರ, ಬಾಗಳಿ, ಕಾಯಕದಹಳ್ಳಿ, ಕೋಡಿಹಳ್ಳಿ, ಅಡವಿಹಳ್ಳಿ, ಎರಡತ್ತಿನಹಳ್ಳಿ, ಚಿಕ್ಕಹಳ್ಳಿ, ಶೃಂಗಾರತೋಟ, ದಡಗರನಹಳ್ಳಿ, ಹರಪನಹಳ್ಳಿ, ಕಣಿವಿಹಳ್ಳಿ ಹಾಗೂ ಮತ್ತಿತರ ಹಳ್ಳಿಗಳ ಜನರ ಸೇರುವ ದೊಡ್ಡ ಉತ್ಸವವಾಗಿದೆ. ನೆರೆಯ ಗ್ರಾಮವಾದ ಕೋಡಿಹಳ್ಳಿಯಲ್ಲಿ ರಥೋತ್ಸವಗಳು ನಡೆಯುವುದಿಲ್ಲವಾದರೂ ಜಾತ್ರೆಗೆ ಎರಡು ದಿನ ಮುಂಚೆ ಎಲ್ಲರೂ ಸೇರಿ ರೊಟ್ಟಿ ಮಾಡಿ ಅವುಗಳನ್ನು ಕೂಲಹಳ್ಳಿ ಜಾತ್ರೆಗೆ ಕೊಡುತ್ತಾರೆ. ಇಡಿ ಕೋಡಿಹಳ್ಳಿಯೇ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಜಾತ್ರೆಯಲ್ಲಿ ಭಾಗವಹಿಸಿ ಜಾತ್ರೆಯ ಯಶಸ್ವಿಗೆ ಕಾರಣೀಭೂತರಾಗಿದ್ದಾರೆ. ಕೂಲಹಳ್ಳಿ ಜಾತ್ರೆಯಂದೆ ಕೋಡಿಹಳ್ಳಿ ಜನರು ಬಂದು-ಬಳಗ, ನೆಂಟರು, ಬೀಗರು ಬಿಜ್ಜರನ್ನು ಕರೆಸಿ ಖುಷಿ ಪಡುತ್ತಾರೆ. ಸ್ನೇಹಿತರು-ಬಂದುಗಳನ್ನು ಕರೆಸಿ ದಿನಗಟ್ಟಲೇ ಸಿಹಿ ತಿನಿಸು ಮಾಡಿಕೊಂಡು ಶೃಂಗರಿಸಿದ ಬಂಡಿಯಲ್ಲಿ ಮನೆ ಮಂದಿಯೆಲ್ಲ ಹೋಗಿ ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ವರ್ಷವಿಡೀ ದುಡಿದವರು ಸಾಲ ಮಾಡಿಯಾದರೂ ಈ ಜಾತ್ರೆಯಲ್ಲಿ ಭಾಗವಹಿಸಿ ಸಂಭ್ರಮಿಸುತ್ತಾರೆ.

ಜಾತ್ರೆ ಮತ್ತು ರಥೋತ್ಸವದ ಗ್ರಾಮೀಣ ಜನಜೀವನದ ಅವಿಭಾಜ್ಯ ಅಂಗವಾಗಿದ್ದು, ಕೃಷಿ ಕಾರ್ಯಕ್ಕೆ ಬೇಕಾದ, ಕುಡ, ಕುಡುಗೋಲು, ಹಾರೆ, ಸುತ್ತಿಗೆ, ಪಾತ್ರೆ, ನೇಗಿಲು, ಬಾರಿಗೋಲು ತರುತ್ತಾರೆ. ಜಾತ್ರೆಗೆ ಮುಂಚೆಯೇ ಮನೆ ಮಂದಿಗೆಲ್ಲ ಹೊಸ ಬಟ್ಟೆ ತರುವುದು ಸಾಮಾನ್ಯವಾಗಿದೆ. ಹೊಸ ಬಟ್ಟೆ ಹೊಲಿಸುವುದೇ ಮಕ್ಕಳಿಗೆ ಸಡಗರ. ಹೆಣ್ಣು ಮಕ್ಕಳೆಂದರೆ ತಮ್ಮ ಮದುವೆಯಲ್ಲಿ ತಂದ ಬೆಲೆ ಬಾಳುವ, ಸೀರೆ ಪೆಟ್ಟಿಗೆಯಲ್ಲಿಟ್ಟು ಮಾಸಿದರೂ ಬಳಸಬೇಕಾದ ಸಂದರ್ಭ ಉಟ್ಟುಕೊಂಡು ಹೊಲದಲ್ಲಿ ಸಿಗುವ ಸೇವಂತಿಗೆ ಹೂವು, ಚೆಂಡು ಹೂವು ಮುಡಿದು ಕೊಂಡು ದೇವರಿಗೆ ಹೋಗುವುದು ಸಂಭ್ರಮ. ಹೆಣ್ಣು ಮಕ್ಕಳನ್ನು ಚಂದ ನೋಡುತ್ತ ವಾರೆ ನೋಟದಿಂದ ಮೆಚ್ಚುತ್ತ ಹೋಗುವ ಹೈದರಿಗೆ ಆನಂದ.

ಜಾತ್ರೆಯಲ್ಲಿ ನವ ವಿವಾಹಿತರು, ಯುವಕ–ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತೇರು ಸಾಗಿದೊಡನೆ, ರಥಕ್ಕೆ ಎಸೆಯಲೆಂದೇ ಸೊವಿ ದರದಲ್ಲಿ ಮಾರುವ ಬಾಳೆಹಣ್ಣು, ಎಸೆಯುತ್ತ ನಮಸ್ಕರಿಸಿ ಪೂಜಿಸುತ್ತಾರೆ. ತೇರು ಇನ್ನು ಸಾಗುತ್ತಲೇ ಇರುತ್ತದೆ, ಕೆಲವರು ಆಗಲೇ ಊರಿಗೆ ವಾಪಸು ತೆರಳುತಿರುತ್ತಾರೆ. ಎತ್ತಿನ ಬಂಡಿಗಳು ಬಸ್‌ಗಳು ವಾಹನಗಳ ಮೂಲಕ, ಹಲವಾರು ಅಲ್ಲೇ ಇದ್ದು ಸಿಹಿ ತಿಂದಿರುವ ಬಾಯಿಗೆ ತುಸುಖಾರದ ತಿನಿಸು ತಿನ್ನಲು ಮಂಡಕ್ಕಿ ಖಾರಾ ಮೆದ್ದರೆ ತಿಂದು ಚಹ, ಪಾನೀಯ ಕುಡಿದು ನಂತರ ತೆರಳುತ್ತಾರೆ. ಜಾತ್ರೆಯಲ್ಲಿ ಯುವತಿಯರು ಮತ್ತು ವಯಸ್ಕ ಮಹಿಳೆಯರು ಪೌಡರು ಡಬ್ಬಿ, ಹಣೆಗೆ ಸಿಂಧೂರ, ಕಣ್ಣಿಗೆ ಕಾಡಿಗೆ, ನೋಡಲು ಕನ್ನಡಿ ಹೀಗೆ ವಿವಿಧ ಅಲಂಕಾರಿಕ ವಸ್ತುಗಳನ್ನು ಖರೀದಿ ಮಾಡುತ್ತಾರೆ. ಪುರುಷರು ತಮ್ಮ ಹೋರಿಗಳಿಗೆ ಬೇಕಾಗುವ ಜೂಲ, ಗೆಜ್ಜೆಸರ ಮುಂತಾದವುಗಳನ್ನು ತೆಗೆದುಕೊಳ್ಳುತ್ತಾರೆ. ಕೂಲಹಳ್ಳಿಯ ರಥೋತ್ಸವದಲ್ಲಿ ದಿನಸಿ ಅಂಗಡಿಗಳಿಂದ ಹಿಡಿದು, ಕಬ್ಬಿಣದ ಸಾಮಾನುಗಳು, ಜಾಸ್ತಿ ಖರ್ಚಾಗುತ್ತವೆ. ಅದಕ್ಕೆಂದೇ ದೊಡ್ಡ ಅಂಗಡಿಗಾರರೇ ಇಲ್ಲಿ ವಾರಗಟ್ಟಲೇ ಠಿಕಾಣಿ ಹಾಕುತ್ತಾರೆ.

**ಉಪಸಂಹಾರ**

ಹೀಗೆ ಜಾತ್ರೆ ರಥೋತ್ಸವಗಳನ್ನು ಜನರ ಜೀವನದಲ್ಲಿ ಹಾಸುಹೊಕ್ಕಾಗಿದ್ದು, ಜಾತಿ–ಜಾತಿಗಳ ನಡುವೆ ಸಾಮಾಜಿಕವಾಗಿ ಬೆರೆಯುವಂತೆ ಮಾಡಿ ಸಾಮರಸ್ಯವನ್ನುಂಟು ಮಾಡುತ್ತದೆ. ಅಲ್ಲದೆ ಜಾತ್ರೆಗಳು ಮನಸ್ಸಿಗೆ ಉಲ್ಲಾಸವನ್ನು ನೀಡುವುದರ ಜೊತೆಗೆ ಬಂಧುಗಳ ನಡುವೆ ಸಂಬಂಧವನ್ನು ಗಟ್ಟಿಗೊಳಿಸುತ್ತದೆಯಲ್ಲದೆ, ಹಲವಾರು ಸಣ್ಣಪುಟ್ಟ ವ್ಯಾಪರಸ್ಥರಿಗೆ ವ್ಯಾಪಾರ ಕೇಂದ್ರಗಳಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ನಶಿಸಿ ಹೋಗುತ್ತಿರುವ ಜಾನಪದ ಕಲೆ–ಸಂಸ್ಕೃತಿ, ಧಾರ್ಮಿಕ ಆಚರಣೆಗಳ ಸಂರಕ್ಷಣೆಗೂ ಅನುಕೂಲವಾಗಿದೆ ಎಂದರೆ ತಪ್ಪಾಗಲಾರದು.

**ವಕ್ತೃಗಳ ವಿವರ**

- ಗೋಣಿಬಸಮ್ಮ, ಪಿ. (2021 ಏಪ್ರಿಲ್ 18). ವಯಸ್ಸು–68, ಕೂಲಿಕಾರ್ಮಿಕರು, ಕೋಡಿಹಳ್ಳಿ, ಹರಪ್ಪನಹಳ್ಳಿ.
- ಹನುವಂತಪ್ಪ. (2021 ಏಪ್ರಿಲ್ 20). ವಯಸ್ಸು, 71, ಕೃಷಿಕರು, ಕೂಲಹಳ್ಳಿ, ಹರಪ್ಪನಹಳ್ಳಿ.
- ಮಂಜಣ್ಣ, ಪಿ. (2021 ಏಪ್ರಿಲ್ 18). ವಯಸ್ಸು–51, ಶಿಕ್ಷಕರು, ಕೋಡಿಹಳ್ಳಿ, ಹರಪ್ಪನಹಳ್ಳಿ.
- ಪಾರಿವೀರಪ್ಪ. (2021 ಏಪ್ರಿಲ್ 20). ವಯಸ್ಸು–82, ಕೃಷಿಕರು, ಕೂಲಹಳ್ಳಿ, ಹರಪ್ಪನಹಳ್ಳಿ.

**ಪರಾಮರ್ಶನ ಗ್ರಂಥಗಳು:**


- ಮಂಜುನಾಥ ಬೇವಿನಕಟ್ಟಿ. (2016). *ವರವು ಕುರವು ಕೂಲಹಳ್ಳಿ.* ಅರುಣ್ ಪ್ರಕಾಶನ.
- ಮಂಜುನಾಥ ಬೇವಿನಕಟ್ಟಿ. (2018). *ಗ್ರಾಮ ಸಮುದಾಯ ಸಂಕಥನ.* ಅರುಣ್ ಪ್ರಕಾಶನ.
- ವಾಮುದೇವ, ಟಿ. (2011). *ಹರಪನಹಳ್ಳಿ ತಾಲ್ಲೂಕಿನ ಗ್ರಾಮದೇವತೆಗಳು.* ಸಿ.ಜಿ ಪ್ರಕಾಶನ.


**ಅನುಬಂಧ 1: ಛಾಯಾಚಿತ್ರಗಳು**



ಎತ್ತಿನ ಬಂಡಿಯಲ್ಲಿ ಜಾತ್ರೆಗೆ ಹೋಗುತ್ತಿರುವುದು



ಗೋಣಿಬಸವೇಶ್ವರ ರಥ